# ದಕ್ಷಿಣ ಭಾರತದ ಮಠಮಾನ್ಯಗಳು

## SOUTH INDIAN MATHAMANYAS




ಪ್ರಧಾನ ಸಂಪಾದಕರು

**ಪ್ರೊ. ಅನಂತ ಝೀ. ಕುಲಕರ್ಣಿ**

ಸಂಪಾದಕರು

**ಡಾ. ರಾಮು ಎಚ್. ಸಜ್ಜನ್**






**Title-** Inscripted Matha's of Kalachuri's of Kalyana

\- Dr. S. R. Nagannasvar

# ಕಲ್ಯಾಣದ ಕಳಚೂರಿಗಳ ಕಾಲದ ಶಾಸನೋಕ್ತ ಮಠಗಳು

**ಪ್ರೊ.ಎಸ್.ಆರ್.ನಾಗಣ್ಣವರ**

ಒಂದು ಸುಂದರವಾದ ಸಮಾಜ ರೂಪಗೊಳ್ಳುವುದು ನಾಲ್ಕು ಗೋಡೆಗಳ ಮಧ್ಯದಲ್ಲಿ ಅಂದರೆ ಶಿಕ್ಷಣ ಕೇಂದ್ರಗಳಲ್ಲಿ. ಒಮದು ಮಗು ಉತ್ತಮ ಶಿಕ್ಷಣವನ್ನು ಪಡೆದುಕೊಂಡು ವಿದ್ಯಾವಂತನಾದರೆ ಅವನು ವಾಸಿಸುವ ಸಮಾಜವನ್ನು ಸುಂದರವಾಗಿ ರೂಪಿಸಬಲ್ಲ. ವಿದ್ಯೆ ಪಡೆದವನಿಗೆ ಎಲ್ಲಿಯಾದರೂ ಗೌರವವಿರುವುದು ಪ್ರಾಚೀನ ಕಾಲದಿಂದಲೂ ನಂಬಿಕೆಯಿದೆ. ಮಾನವನ ಜೀವನದ ಸುಗಮತೆಗೆ ಶಿಕ್ಷಣ ಅತ್ಯವಶ್ಯ. ಶಿಕ್ಷಣ ತಾಯಿಯಂತೆ ರಕ್ಷಣೆ ಮಾಡುತ್ತದೆ, ತಂದೆಯಂತೆ ಉತ್ತಮವಾದ ಮಾರ್ಗದಲ್ಲಿ ನಡೆಯುವಂತೆ ಮಾಡುತ್ತದೆ. ಪತ್ನಿಯಂತೆ ಸುಖಪಡಿಸುತ್ತದೆ. ಇವುಗಳ ಜೊತೆಗೆ ವಿದ್ಯೆಯಿಂದ ವಿನಯ ವಿನಯದಿಂದ ಗೌರವ ಗೌರವದಿಂದ ಧನ, ಧನದಿಂದ ಧರ್ಮ ಧರ್ಮದಿಂದ ಸುಖ ದೊರೆಯುತ್ತದೆ ಎಂಬ ನಂಬಿಕೆಯು ಇಂದಿಗೂ ಸತ್ಯ. ಈ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದ ಚರಿತ್ರೆಯನ್ನು ಅವಲೋಕಿಸಿದಾಗ ಇಂತಹ ಉತ್ತಮ ಶಿಕ್ಷಣವನ್ನು ನೀಡುವ ಕಾರ್ಯವನ್ನು ಮಠಗಳು ಮಾಡುತ್ತಿದ್ದವು.

ಮಠಗಳು ಶಿಕ್ಷಣದ ನೆಲೆಗಳು, ನೈಷ್ಠಿಕ ಬ್ರಹ್ಮಚಾರಿಗಳಾದ ಸ್ಥಾನಪತಿಗಳ ಮತ್ತು ತಪೋಧನರ ವಾಸಸ್ಥಳಗಳೂ ಆಗಿದ್ದವು. (**ಹಿರೇಮಠ ಚನ್ನಬಸಯ್ಯ (1995): ಕುರುಗೋಡು ಸಿಂಧರು. ಪು–196**) ಮಠಗಳನ್ನು ಶಾಲೆಗಳು ಅಥವಾ ಶಾಲೆಗಳನ್ನೇ ಮಠಗಳು ಎಂದು ತಿಳಿಯಲು ಪ್ರಾಚೀನ ಶಾಸನಗಳೇ ಪೂರಕ ಆಕರಗಳಾಗಿವೆ.

ಸಾಮಾನ್ಯವಾಗಿ ಮಠಗಳು ಎಂದರೆ ಯತಿಗಳು ವಾಸಿಸುವ ಸ್ಥಳ ಎಂದರ್ಥ. ಇಂತಹ ವಾಸಸ್ಥಾನಗಳಲ್ಲಿ ವಿದ್ಯಾದಾನ ನಡೆಯುತ್ತಿದ್ದುದರಿಂದ ಅವುಗಳು ವಿದ್ಯಾಕೇಂದ್ರಗಳಾಗಿ, ಪಾಠಶಾಲೆಗಳಾಗಿ ಬೆಳೆದವು. ಶಿಷ್ಯರಿರುವ ಸ್ಥಳವೇ ಮಠ ಎಂದು ಅಮರಕೋಶದಲ್ಲಿ ಉಲ್ಲೇಖಿಸಲಾಗಿದೆ. ಶಾಸನೋಕ್ತವಾಗಿ ಅವಲೋಕಿಸಿದಾಗ ಪಂಚಮಠ, ಹಿರಿಯಮಠ, ಕೋಡಿಮಠ, ಸಂಜೆಮಠ, ಕಲ್ಮಠ ಮುಂತಾದ ಮಠಗಳ ಉಲ್ಲೇಖಗಳಿವೆ.

**ಕಳಚೂರಿಗಳ ಶಾಸನಗಳಲ್ಲಿ ಮಠಗಳು :**

ಕಲ್ಯಾಣದ ಮಹಾಮಂಡಳೇಶ್ವರರಾಗಿ ಅಧಿಕಾರವನ್ನು ಆರಂಭಿಸಿದ ಮಹಾಮಂಡಳೇಶ್ವರನಾದ ಬಿಜ್ಜಳದೇವನು ಪಂಚಮಠದ ಸ್ಥಾನಾಚಾರ್ಯ ಯಮ ನಿಯಮ ಸ್ವಾಧ್ಯಾಯ, ಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿ ಶೀಲ ಷಡಂಗೋಪಹಾರಾದಿ ಸಂಪನ್ನರಾದ ಶ್ರೀಮತ ಕಳೇಶ್ವರ ಪಂಡಿತರ ಕಾಲ್ತೊಳೆದು ಶಿವಾಲಯಕ್ಕೆ ಕೆರೆಯ ಭೂಮಿ ಒಂದು ಭಾಗವನ್ನು ಮಠದ ಕಾರ್ಯಗಳಿಗೆ ಎರಡು ಭಾಗಗಳನ್ನು ನಡೆಸಬೇಕು ಎಂದು ಉಚ್ಚಂಗಿದುರ್ಗದ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.3; ಎ.ಆರ್.ನಂ.39 1899, ಎಸ್,ಆಯ್,ಆಯ್ 6.ನಂ.575**) ಕ್ರಿ.ಶ.1064 ರ ಶಾಸನವು ಹೇಳುತ್ತದೆ. ಒಂದು ವೇಳೆ ಈ ಧರ್ಮವನ್ನು ಪಾಲಿಸಿದೇ ಅಳಿವರೆ ಸಾವಿರ ಕಪಿಲೆಗಳನ್ನು ಸಾವಿರ ವೇದಪಾರಂಗತರಾದ ಬ್ರಾಹ್ಮಣರನ್ನು ಸಾಸಿರ ಲಿಂಗವನ್ನು ಅಳಿದ ಪಂಚಮಹಾಪಾತಕ್ಕೆ ಕಾರಣರಾಗುವರು ಎಂದು ಕೊನೆಯಲ್ಲಿ ಶಾಪಾಶಯವನ್ನು ದಾಖಲಿಸಿದೆ.

ಕೋಳೂರಿನ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.17; ಎ.ಆರ್.ನಂ.17 1899, ಎಸ್,ಆಯ್,ಆಯ್ 15.ನಂ.595, ಕ.ವಿ.ವಿ.ಶಾ.ಸಂ.10. ಮುದ್ದೇಬಿಹಾಳ ನಂ.11; ಬಿ.ಕೆ.ನಂ.36.1929–30**) ಕ್ರಿ.ಶ.12ನೇ ಶತಮಾನದ ಶಾಸನದಲ್ಲಿ ಮುಮ್ಮುರಿದಂಡಗಳು, ಎಂಟುಹಿಟ್ಟು ಸಂಘದವರ ಜೊತೆಗೂಡಿ ಪಂಚಮಠದವರು ಹಾಗೂ ಮಹಾಮಂಡಳೇಶ್ವರ ಪೆರ್ಮಾಡಿ ದೇವರಸನು ಸೇರಿ ನಾಯ್ಕನ ಮಗನಾದ ರಾವೆಯ ಎಂಬಾತನಿಗೆ ಮನೆಯೊಂದನ್ನು ವೀರವೃತ್ತಿಯಾಗಿ ಬಿಟ್ಟರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವ್ಯಾಪಾರಿ ಸಂಘದವರೊಂದಿಗೆ ಮಠದವರು ಸಹ ಧಾರ್ಮಿಕ ಕಾರ್ಯಗಳಲ್ಲಿ ದಾನ ದತ್ತಿಗಳನ್ನು ನೀಡುವುದರಲ್ಲಿ ಭಾಗಿಗಳಾಗುತ್ತಿದ್ದರು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ದೇವಸ್ಥಾನಹಕ್ಕಲ (**ಜಿ.ಕೆ. ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.34; ಇ.ಸಿ.8.ಸೊರಬ.ನಂ.277**) ಗ್ರಾಮದ ಕೈಟಭೇಶ್ವರ ದೇವಾಲಯದಲ್ಲಿರುವ ಕ್ರಿ.ಶ. 1151ರ ಶಾಸನದ ಪ್ರಕಾರ ದೇಶಕ್ಕೆ ತಿಲಕಪ್ರಾಗಿದ್ದ ಪುರಂದರಪುರ, ಮಹಾಬಲಿಪುರವೆಂದು ವರ್ಣಿತವಾಗಿರುವ ಬನವಾಸಿಯು (ಬಲಿಪುರವು) ಪಂಚಮಠಗಳಿಂದ, ಮೂರು ಬ್ರಹ್ಮಪುರಿಗಳಿಂದ ಕೂಡಿದ್ದು ಸೌಂದರ್ಯದಿಂದ ಕಂಗೊಳಿಸುತ್ತಿತ್ತು. ಇದನ್ನು ಶ್ರೀಮನ್ ಮಹಾಪ್ರಧಾನ ದಂಡನಾಯಕ ಮಹಾದೇವನು ಆಳುತ್ತಿದ್ದನು.

ವೈಷ್ಣವ ಪರಂಪರೆಯ ಸಂದೇಶವನ್ನು ಸಾರುವ ವಿಜಯಪುರದ ಅರೆಕಿಲ್ಲಾ (ಅರಕೇರಿ) (**ಜಿ.ಕೆ.ದೇವರಾಜಸ್ವಾಮಿ. ಕಳಚೂರಿ ಶಾಸನಗಳು. ನಂ.35; ಎಸ್,ಆಯ್,ಆಯ್ 18.ನಂ.156; ಕ.ವಿ.ವಿ.ಶಾ.ಸಂ.10.ಬಿಜಾಪುರ ನಂ.43; ಬಿ.ಕೆ.ನಂ.36.1929–30**) ಕ್ರಿ.ಶ.1192 ರ ಶಾಸನದಲ್ಲಿ ಕಡತವೆರ್ಗಡೆ ವೈಜನಾಥಯ್ಯನು

ಮೂಲಸ್ಥಳದ ನೂರು ಮತ್ತು ಇನ್ನೂರು ಗ್ರಾಸ ಪರಿದಾಸವನ್ನು ಸರ್ವನಮಸ್ಯವಾಗಿ ನೀಡಿದಲ್ಲದೇ ಸಂಜೆಮತಕ್ಕೆ ಕರಿಯ ಹೊಲದಿಂದ ಪಡುವಣ ಸ್ಥಳದ 12 ಮತ್ತರು ಭೂಮಿಯನ್ನು ಸೋಮಗ್ರಹಣದ ದಕ್ಷಿಣಾಯಣ ಸಂಕ್ರಮಣದ ಸಂದರ್ಭದಲ್ಲಿ ಕೊಡಮಾಡಿದನು.

ಬಿಜ್ಜಳದೇವರಸನ ಬಳ್ಳಿಗಾವೆಯ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.39; ಇ.ಸಿ.ಸಂ.7(ರಿ) ಶಿಕಾರಿಪುರ ನಂ.108**) ಕ್ರಿ.ಶ.1155 ರ ಶಾಸನದಲ್ಲಿ ಪಲವುಂಪುರವು ಪಂಚಮಠಗಳಿಂದ ಬ್ರಹ್ಮಪುರಿಗಳಿಂದ ಕೂಡಿದ್ದು ಮಹಾದೇವದಂಡನಾಯಕನು ಬಳ್ಳಿಗಾವಿಯ ಶ್ರೀಮತ್ ಕೋಡಿಮಠದ ಆಚಾರ್ಯ ವಾಮಶಕ್ತಿಪಂಡಿತದೇವರ ಕಾಲ್ತೊಳೆದು ತಂದೆಯ ಹೆಸರಿನಲ್ಲಿ ದೇವಾಲಯನ್ನು ನಿರ್ಮಿಸಿ ಸೂರ್ಯಗ್ರಹಣದ ಸಂದರ್ಭದಲ್ಲಿ ದೇವರ ಅಂಗಭೋಗ, ರಂಗಭೋಗ, ತಪೋಧನರ ಆಹಾರ, ವಿದ್ಯಾದಾನ, ಮಾಟಕೂಟ ಪ್ರಾಸಾದ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಭೂದಾನ ಮಾಡಿದರು.

ಬಳ್ಳಿಗಾವಿಯಲ್ಲಿರುವ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು**. ನಂ.40; **ಇ.ಸಿ.ಸಂ.7(ರಿ) ಶಿಕಾರಿಪುರ ನಂ.104**) ಮತ್ತೊಂದು ಶಾಸನದಲ್ಲಿ ಉತ್ತಮಾಮಠಂ ಪುರಾಣಕಮಠನನ್ತೆಸಕಳಲೋಕಾಧಾರ ಕ್ಷೀರನೀರಾಕರದಂತೆ ನಿಜಲಕ್ಷ್ಮೀಪರಿತೋಷಿತ ಪುರಾಣಪುರುಷರು ಭವಾನೀ ಭವನದನ್ತೆ ಬ್ರಹ್ಮಚಾರಿ ಸದಾಚಾರಿ ಸಂಭಾವಿತರು ಕುರುಕ್ಷೇತ್ರದಂತೆ ಸರಸ್ವತೀವಿಳಸಿತಮುಂ ಖಚರಲೋಕದಂತೆ ವಿದ್ಯಾಧರಾಧೀಶ್ವರ ಪರಿವೃತಮುಂ ಶ್ರೀಕೈಲಾಸದಂತೆ ವಾಮಶ್ಕತಿದೇವರ ಪರಿಪಾಳಿತಮುಮಾಗಿರ್ಪುದುಮ ಉತ್ತಮವಾಮಠದ ಗುರುಪರಂಪರೆಯು ಇಂತಿದೆ. ಮೂವರು ಕೋಣೆ ಸಂತತಿಯ ದೇವವ್ರತನೆಸವಪರ್ವತಾವಳಿಯೊಳ್ ತಾನಾವಿರ್ಭವಿಸಿದನ ಮಳಯಶೋವೀಭವ ವಿನೂರನೆನಿಪ ಗೌತುಮಮುನಿಪ ಆ ಗೌತುಮ ಮುನಿಯ ತನೂಜ ಶ್ರೀಗಿರಿಜಾಪತಿ ಪದಾಂಬುಜೋನ್ಮದಭೃಂಗಂರಾಗಪರಾಙ್ಮುಖನು ಚಿತೋದ್ಯೋಗಂ ವಾಮಶಕ್ತಿ ಪಂಡಿತದೇವ ಎಂದು ಉಲ್ಲೇಖಿಸಿದೆ.

ಹಾವೇರಿಯ ಕ್ರಿ.ಶ.1157 ರ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.46; ಬಿ,ಕೆ,ನಂ.103 1932-33, ಎಸ್,ಆಯ್,ಆಯ್,ಸಂ.18.ನಂ.159**) ಶಾಸನವು ಓಂ ನಮಃ ಶಿವಾಯಃ ನಮಸ್ತುಂಗಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ಎಂಬ ಶಿವಪರ ಸ್ತುತಿಯೊಂದಿಗೆ ಆರಂಭವಾಗಿದ್ದು ಮಾಣಿಕಮಠದ ಶ್ರೀಬ್ರಹ್ಮಭಟಾರರ ಹೇಸರನ್ನು ಉಲ್ಲೇಖಿಸಿದೆ.

ಬಳ್ಳಿಗಾವಿಯ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.54; ಇ.ಸಿ.ಸಂ.7(ರಿ) ಶಿಕಾರಿಪುರ ನಂ.123**) ಕ್ರಿ.ಶ.1159 ರ ಶಾಸನದಲ್ಲಿ ಐದು ಮಠಗಳ ಗುರುಗಳನ್ನು ಪರಿಚಯಿಸಿದೆ. ಪಂಚಮಠದ ಆಚಾರ್ಯ ಧರ್ಮಶಿವದೇವರು,

ಹಿರಿಯಮಠದ ಶ್ರೀ ಜಗದೇಕಮಲ್ಲೇಶ್ವರದಾಚಾರ್ಯ ಮೂಲಿಗಮಧುಕೇಶ್ವರ ಪಂಡಿತದೇವರು, ಶ್ರೀ ಪಂಚಲಿಂಗದಾಚಾರ್ಯ ಸರ್ವೇಶ್ವರಪಂಡಿತದೇವರು, ತ್ರಿಪುರಾಂತಕಮಠದ ಆಚಾರ್ಯ ಜ್ಞಾನಶಕ್ತಿಪಂಡಿತದೇವರು ಮತ್ತು ಶ್ರೀಕೋಡಿಯ ಮಠದ ಆಚಾರ್ಯ ವಾಮಶ್ಕತಿಪಂಡಿತದೇವರು ಈ ಎಲ್ಲರ ಸನ್ನಿಧಿಯಲ್ಲಿ ಮಹಾಪ್ರಧಾನ ಕಸಲಯ್ಯನಾಯಕನು ಅನುಕೂಲತೆಯೊಳಂ ಮಹಾಪ್ರಧಾನ ಬನವಸೆನಾಡ ಹೆರ್ಗ್ಗಡೆ ಕೇಶಿಮಯ್ಯನು ಅನೇಕ ಕರಣರ ಜೊತೆಯಾಗಿ ಉತ್ತರಾಯಣ ಸಂಕ್ರಮಣದ ವ್ಯತಿಪಾತ ಚಂದ್ರಗ್ರಹಣದ ಸಂದರ್ಭದಲ್ಲಿ ವೀರಕೇಶವದೇವರ ನೈವೇದ್ಯ, ನಂದಾದೀವಿಗೆ, ಚೈತ್ರಪವಿತ್ರ ಮಾಟಕೂಟಕ್ಕೆ ಪಂಚಲಿಂಗದೇವರಿಗೆ ಎರಡು ವೃತ್ತಿ ದಾನ ನೀಡಿದರು ಎಂದು ದಾಖಲಿಸಲಾಗಿದೆ.

ಹುಲಗೂರಿನ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ..66; ಬಿ.ಕೆ.ನಂ.27-28. 1944-45)** ಕಾಲಮೇಶ್ವರ ದೇವಾಲಯದ ಸಮೀಪದಲ್ಲಿರುವ ಕ್ರಿ.ಶ.1161ರ ಶಾಸನದಲ್ಲಿ ರಾಮೇಶ್ವರ ದೇವರ ಗಂಧ, ಧೂಪ, ನೈವೇದ್ಯ, ನಂದಾದೀಪಕ್ಕೆಂದು ಗಾವುಂಡರು, ಅರವತ್ತೊಕ್ಕಲರು ದಾನ ನೀಡುವಾಗ ಪಂಚಮಠದ ಸ್ಥಾನದ ಐನೂರ್ವರು ಸಾನಿಧ್ಯವಹಿಸಿದ್ದರು. ಈ ದಾನಿಗಳು ಬ್ರಹ್ಮಸಿಂಗಿ ಪಂಡಿತರ ಪಾದಪೂಜೆ ಮಾಡಿ ದಾನ ನೀಡಿದರು ಎಂದು ಉಲ್ಲೇಖಿಸಲಾಗಿದೆ.

ಬಳ್ಳಿಗಾವಿಯ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.71; ಇ.ಸಿ.ಸಂ.7(ರಿ) ಶಿಕಾರಿಪುರ ನಂ.102, ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.33)** ಕ್ರಿ.ಶ.1162 ರ ಶಾಸನದ ಪ್ರಕಾರ ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೇ ವಿದ್ಯಾದಾನ, ಅನಾಥರ ರಕ್ಷಣೆ, ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿರುವ ಕುರಿತಾಗಿ ವರ್ಣಿಸಿದೆ. ಆ ಶಾಸನದ ಪ್ರಕಾರ ಬಳ್ಳಿಗಾವಿಯ ಕೋಡಿಮಠದಲ್ಲಿ ವಿದ್ಯಾರ್ಥಿಗಳು ಆರು ಅಂಗಗಳನ್ನು, ನಾಲ್ಕುವೇದ,ಕೌಮಾರ, ಪಾಣಿನಿ, ಶಾಕಟಾಯನರ ಪ್ರಮುಖ ವ್ಯಾಕರಣಾಧ್ಯಯನ, ಷಡ್ದರ್ಶನಗಳು, ಅಷ್ಟಾಂಗಯೋಗ, 18 ಪುರಾಣ, ಧರ್ಮಶಾಸ್ತ್ರ, ಕಾವ್ಯ, ನಾಟ್ಯ, ನಾಟಕ ಮುಂತಾದ ವಿಷಯಗಳ ವ್ಯಾಸಂಗ ಮಾಡುತ್ತಿದ್ದರು. ಅಲ್ಲಿ ದೀನರು, ಅನಾಥರು, ಕಲಾಕಾರರಿಗೆ, ಮುನಿಗಳಿಗೆ, ಭಿಕ್ಷುಕರಿಗೆ ಅನ್ನದಾನ ಮತ್ತು ಔಷಧೋಪಚಾರದ ವ್ಯವಸ್ಥೆಗಳನ್ನು ಮಾಡಲಾಗುತ್ತಿತ್ತು. ಅಲ್ಲದೇ ಈ ಮಠದ ಗುರುಗಳು ಪ್ರಭಾವಿಗಳು, ಪಾಂಡಿತ್ಯ ವಿಶಾರದರಾಗಿದ್ದರು. ಅವರಲ್ಲಿ ಗೌತುಮಾಚಾರ್ಯರ ಶಿಷ್ಯ ವಾಮಶಕ್ತಿಪಂಡಿತರು ಮಹಾ ತಪಸ್ವಿಗಳೂ ಸೂರ್ಯನಂತೆ ಎಲ್ಲರನ್ನು ಬೆಳಗುತ್ತಿದ್ದರು ಹಾಗೂ ಅವರು ರಾಜಗುರುಗಳಾಗಿಯೂ ಅರಸರಿಗೆ ಸಲಹೆಗಳನ್ನು ನೀಡುತ್ತಿದ್ದರು. ಇದುವರೆಗೂ ದೊರೆತಿರುವ ಯಾವುದೇ ಅಗ್ರಹಾರದಲ್ಲಿ ಇಂತಹ ದಾಸೋಹ ಕಾರ್ಯ ನಡೆದಿರುವುದರ ಕುರಿತಾಗಿ ಯಾವುದೇ ಶಾಸನವು ಉಲ್ಲೇಖಿಸುವುದಿಲ್ಲ.

ಅಣ್ಣಿಗೇರಿಯ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.72; ಬಿ.ಕೆ.ನಂ.199 1928–29, ಎಸ್,ಆಯ್.ಆಯ್.ಸಂ.15. ನಂ.102; ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.29)** ಕ್ರಿ.ಶ.1162 ರ ಶಾಸನದ ಪ್ರಕಾರ ಬೆಳ್ವಲನಾಡಿನ ಪೆರ್ಗಡೆ ಮಹಾಪ್ರಧಾನ ಶ್ರೀಧರಾರ್ಯನು ಪಟ್ಟಣದ ಪೆರ್ಗಡೆ ಕೇಶಿರಾಜನ ಭಿನ್ನಹದಂತೆ ಸೂರ್ಯಗ್ರಹಣದ ಅವಧಿಯಲ್ಲಿ ಮೂಲಸ್ಥಾನ ಚಂಡಿಕಾದೇವಿಗೆ ಪೂಜೆಗೋಸ್ಕರ, ಬ್ರಾಹ್ಮಣರಿಗಾಗಿ ದಾನ ನೀಡಿದರು. ಅಲ್ಲದೇ ಇದೇ ಸಂದರ್ಭದಲ್ಲಿ ಬಳ್ಳಿಗಾವಿಯ ಕೋಡಿಮಠಕ್ಕೆ ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ. ಇದರಿಂದ ನಾಡಿನ ವಿವಿಧ ಭಾಗಗಳಿಂದ ಕೋಡಿಮಠಕ್ಕೆ ದಾನಗಳು ಬರುತ್ತಿದ್ದವು ಅದರಿಂದಲೇ ಅಲ್ಲಿ ತ್ರಿವಿಧ ದಾಸೋಹ ಕಾರ್ಯಗಳು ಜರುಗುತ್ತಿದ್ದವೆಂಬುದನ್ನು ಗುರುತಿಸಬಹುದಾಗಿದೆ.

ಬಂದಳಿಕೆಯ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.84; ಇ.ಸಿ.ಸಂ.7. (ರಿ) ಶಿಕಾರಿಪುರ ನಂ.242) ಶಾಸನವು** ಬಿಜ್ಜಳರಸನ ಕಾಲದ ಸುಂಕಾಧಿಕಾರಿ ಮಾಚಯ್ಯನ ಮಗ ಸರ್ವಾಧಿಕಾರಿ ಸೋಮನ ಗುರುಗಳು ಒಮ್ಮಕೂರಿನ ಹಿರಿಯ ಮಠದ ಆಚಾರ್ಯರಾದ ದೇವಶಕ್ತಿ ಬತೀಂದ್ರರು ಎಂದು ಶಾಸನವು ತಿಳಿಸುತ್ತದೆ. ಮುಂದುವರೆದು ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಜಪಸಮಾಧಿಶೀಲ ಸಂಪನ್ನರು ಪ್ರಸಿದ್ಧ ಬಮ್ಮಕೂರಿನ ಹಿರಿಯಮಠದ ಆಚಾರ್ಯರು ಎಂದು ಹೇಳುತ್ತ ಕಾಳಾಮುಖರಾದ ದೇವಶಕ್ತಿ ಬ್ರತೀಂದ್ರರಿಗೂ, ಉತ್ತಮ ಬಾಂದವ್ಯ ಇತ್ತೆಂಬುದನ್ನು ಶಾಸನವು ದಾಖಲಿಸುತ್ತದೆ.

ಲಕ್ಷ್ಮೇಶ್ವರದ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.124; ಬಿ.ಕೆ.ನಂ.52– 1935–36, ಎಸ್,ಆಯ್.ಆಯ್.ಸಂ.20. ನಂ.144)** ಕ್ರಿ.ಶ.1166 ರ ಶಾಸನವು ವಿಷ್ಣುಸ್ತುತಿಯಿಂದ ಆರಂಭವಾಗಿದ್ದು ಹುಲಿಗೆರೆ–300ನ್ನು ಆಳುತ್ತಿದ್ದ ಶ್ರೀಧರ ದಂಡನಾಯಕನು ಮತ್ತು ಅವನ ಸಹೋದರನಾದ ಮಾಚರಸ ದಂಡನಾಯಕರು ಬ್ರಹ್ಮಪುರಿಯೊಂದನ್ನು ನಿರ್ಮಿಸಿ ಅಲ್ಲಿಗೆ ಅಧ್ಯಯನಕ್ಕೆಂದು ಬರುವ ವಿವಿಧ ಶಾಖೆಯ 52 ಜನ ಬ್ರಾಹ್ಮಣರಿಗೆ ಅವಕಾಶ ಮಾಡಿಕೊಡುವುದರೊಂದಿಗೆ ಅದರ ನಿರ್ವಹಣೆಗೆಂದು ಭೂದಾನ ಮಾಡಿದರು. ಈ ದಾನವನ್ನು ಮಹಾಜನಗಳು, ನಕರರು, ಪಂಚಮಠದ ಸ್ಥಾನಗಳು, ಮನ್ನೆಯರು ಸ್ವಧರ್ಮದಿಂದ ಕೂಡಿ ಪ್ರತಿಪಾಳಿಸುವರು ಎಂದು ಹೇಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವೈಷ್ಣವ ದೇವಾಲಯಗಳಿಗೆ, ಬ್ರಾಹ್ಮಣರಿಗೆ ಪಂಚಮಠದವರು ದಾನ ನೀಡಿರುವುದಲ್ಲದೇ ಕೆಲವು ಸಂದರ್ಭಗಳಲ್ಲಿ ನೀಡಿದ ದಾನಗಳನ್ನು ಪಾಲಿಸಿಕೊಂಡು ಹೋಗುವ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರೆಂಬುದು ಈ ಶಾಸನದ ಆಶಯ.

ಬೆನಚಮಟ್ಟಿಯ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.126, ಇ.ಆಯ್.ಸಂ.20.ಪುಟ–109–122)** ಶಾಸನದನ್ವಯು ತೆಲ್ಲಿಗಾಸದ ಐವತ್ತು

ಕುಟುಂಬದವರು ತೆಲ್ಲಿಗೇಶ್ವರ ದೇವರ ಪ್ರತಿಷ್ಠೆಯನ್ನು ಮಾಡಿ ದೇವಾಯತವನ್ನು ಮಾಡಿಸಿ ಉತ್ತರಾಯಣ ಸಂಕ್ರಮಣದ ಸಂದರ್ಭದಲ್ಲಿ ಶ್ರೀಮತ್ ತೆಲ್ಲಿಗೇಶ್ವರ ದೇವಾಲಯಕ್ಕೆ ಸಿಂಹೇಶ್ವರ ದೇವರ ಮಠದ ಆಚಾರ್ಯರಾದ ಚಂದ್ರಮೌಳಿದೇವರ ಕಾಲ್ತೊಳೆದು ಎಣ್ಣೆ, ಚೈತ್ರಪವಿತ್ರಕ್ಕೆ ಐದು ವೀಸ ಹಣ, ಮಠಕ್ಕೆ ಬಂದ ಅಭ್ಯಾಗತರಲ್ಲಿ ನಡವ ಮನುಷ್ಯರ ಆಹಾರಕ್ಕೆ ದಾನಕ್ಕೆಂದು ತಿಂಗಳಿಗೆ ಒಕ್ಕಲ್ಗೋಳೊಳ್ ಜೋಳ ಒಂದು ಕೊಳಗ, ಒಂದು ಮತ್ತರು ತೋಟ, ದೀಪಾವಳಿಯ ಪರ್ವದಲ್ಲಿ ಒಂದು ಮಾನ ಎಣ್ಣೆ ಇದರೊಂದಿಗೆ ಐನೂರ್ವರು ಸ್ವಾಮಿಗಳು ಒಂದು ಮಳಿಗೆಯೊಳಗೆ ಅಡಿಕೆ, ತಂಬುಲಿಗರು ಎಲೆ ಮುಂತಾದ ದಾನಗಳನ್ನು ಬಿಟ್ಟರು.

ಮಹಾಮಂಡಳೇಶ್ವರ ಕೈಲಾಸರಸನು ಕೈಲಾಸ ದೇವಾಲಯಕ್ಕೆ ನೀಡಿದ 325 ಮತ್ತರು ಭೂಮಿಯ ಒಂದು ಭಾಗವನ್ನು ಮೈಳಯನಾಯಕನ ಅಧಿಕಾರಿ, ದಂಡನಾಯಕ ಬಸವರಸ ಅವನ ಸಹೋದರ ಕೊಪ್ಪರಸ, ಮಹಾಮಂಡಳೇಶ್ವರರು ಅಗರಬೇಡದ ಪ್ರಭುಗಾವುಂಡರು ಸೇರಿ ಪಂಚಮಠದ ಸ್ಥಾನಾಚಾರ್ಯ ಮಗ್ಗಜೀರ ಕಾಲ್ತೊಳೆದು ದಾನವಾಗಿ ಬಿಟ್ಟರು ಎಂದು ಅಗರಬೇಡದ (**ಜಿ.ಕೆ.ದೇವರಾಜಸ್ವಾಮಿ.: ಕಳಚೂರಿ ಶಾಸನಗಳು. ನಂ.165; ಬಿ.ಕೆ. ನಂ.3–1937–38, ಎಸ್.ಆಯ್.ಆಯ್. ಸಂ 20. ನಂ.152; ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.103, ಕ.ವಿ.ವಿ.ಶಾ.ಸಂ.10.ಇಂಡಿ.ನಂ.3**) ಕ್ರಿ.ಶ.1170 ರ ಶಾಸನವು ಹೇಳುತ್ತದೆ.

ಮನಗೂಳಿಯ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.296; ಬಿ.ಕೆ.ನಂ.26. 1930–31, ಎಸ್.ಆಇಸ್.ಆಇಸ್.ಸಂ.15. ನಂ.133.; ಕ.ವಿ.ವಿ.ಶಾ.ಸಂ.10.ಬಾಗೇವಾಡಿ ನಂ.34, ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.187**) ಕ್ರಿ.ಶ. 1178 ರ ಶಾಸನವು ಮಣಿಂಗವಳ್ಳಿಯ ಮಹಾಜನರಿಗೆ, ಮೂಲಿಗರಿಗೆ, ಪಂಚಮಠದ ಸ್ಥಾನಪತಿಗಳಿಗೆ ಸಮಸ್ತ ಜಾತಿ ವರ್ಗದವರಿಗೆ ಮಹಾಪ್ರಧಾನ ದಂಡನಾಯಕ ಬ್ರಹ್ಮದೇವ ಅವರ ಹೆರ್ಗಡೆ ಮಟ್ಟರಸರು ಚಕ್ರವರ್ತಿಯ ಹೇಳಿಕೆಯಂತೆ ದಾನ ನೀಡಿದರು.

ಲಕ್ಷ್ಮೇಶ್ವರದ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು.ನಂ.266; ಐ.ಡಿ.ನಂ.21–2006.ಪು.82–83.UGDS Pg.296-298**) ಕ್ರಿ.ಶ.1177 ರ ಶಾಸನದ ಪ್ರಕಾರ ಪುಲಿಗೇರಿ ರಾಜಧಾನಿ ಪಟ್ಟಣದಲ್ಲಿರುವ ಮಹಾಅಗ್ರಹಾರದ ಮಹಾಜನಗಳು, ವಿವಿಧ ಗ್ರಾಮಗಳ ಗಾವುಂಡರು, ಅಯ್ಯಣ ದಂಡನಾಯಕರೊಂದಿಗೆ ಸಮಸ್ತ ಜನರೊಂದಿಗೆ ಪಂಚಮಠದ ಸ್ಥಾನಪತಿಗಳು ಒಂದಾಗಿ ಸ್ವಯಂಭೂ ಸೋಮನಾಥ ದೇವರ ಪಂಚ ಉತ್ಸವಗಳ ಸಂದರ್ಭದಲ್ಲಿ ಮಾಡುವ ಅಂಗಭೋಗ, ರಂಗಭೋಗಕ್ಕೆಂದು ಸುತ್ತಲಿನ ಗ್ರಾಮಗಳಿಗೆ ಹೋಗಿ ಒಂದೊಂದು ಗದ್ಯಾಣ ಹಣವನ್ನು ಸಂಗ್ರಹಿಸಿ ತಂದು ಶಿವರಾತ್ರಿಯ ಸಂದರ್ಭದಲ್ಲಿ ದಾನ ನೀಡಿದರು.

ಮುಳಗುಂದದ (**ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.292; ಬಿ.ಕೆ.ನಂ.86 1926–27, ಎಸ್.ಆಯ್.ಆಯ್.ಸಂ.15. ನಂ.131.ಮುಳಗುಂದ ನಾಡು**

**ಪು-64; ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.187)** 1178 ರ ಶಾಸನದಲ್ಲಿ ಮುಳಗುಂದದ ಮಹಾಜನರು, ಮುದ್ದುಮಂಬಳ ಪಂಚಮಠದ ಐನೂರ್ವರು ಒಂದಾಗಿ ಶ್ರೀವಿದಿರೇಶ್ವರದ ಆಚಾರ್ಯ ವಾಮಶಕ್ತಿ ಪಂಡಿತದೇವರ ಕಾಲ್ತೊಳೆದು ಶ್ರೀವಿದಿರೇಶ್ವರ ದೇವರ ನೈವೇದ್ಯಕ್ಕೆಂದು ನಾಲ್ಕು ಮತ್ತರು ಭೂಮಿಯನ್ನು ಮತ್ತು ತೋಟವೊಂದನ್ನು ದಾನವಾಗಿ ಬಿಟ್ಟರು. ಈ ಶಾಸನಗಳ ಮೂಲಕ ಮಠಗಳು ಕೇವಲ ದಾನಗಳನ್ನು ಸ್ವೀಕರಿಸುವುದಲ್ಲದೆ ಸಂದರ್ಭ ಬಂದಾಗ ದಾನಗಳನ್ನು ಮಾಡುತ್ತಿರುವುದನ್ನು ಗುರುತಿಸಿವೆ.

ಅರಸ ಬಿಜ್ಜಳದೇವ ಮತ್ತು ಮಹಾಮಂಡಳೇಶ್ವರ ಸಿಂಧದ ವಿಕ್ರಮಾದಿತ್ಯನ ಅಧಿಕಾರಿ ಬಾಹತ್ತರ ನಿಯೋಗಾಧಿಪತಿ ಬಾಚೆಯ ಸಾಹಣಿಯು ಮಹಾಅಗ್ರಹಾರ ರೋಣದ ಅಶೇಷ ಮಹಾಜನಗಳ ಸನ್ನಿಧಾನದಲ್ಲಿ ಕಾಳಾಮುಖ ಪರ್ವತಾವಳಿ ತಪೋನಿಷ್ಠ ಪರರೆನಿಸಿ ಪ್ರಸಿದ್ಧ ಕೊಪ್ಪಿನ ವಖ್ಖಾಣದೇವರು ಅವರ ಶಿಷ್ಯ ರುದ್ರಶಕ್ತಿದೇವರು ಅವರ ಶಿಷ್ಯ ಜ್ಞಾನಶಕ್ತಿದೇವರು ಅವರ ಶಿಷ್ಯ ಕಲ್ಲಮಠದ ಆಚಾರ್ಯ ಗುರುಭಕ್ತದೇವರಿಗೆ ಭೂದಾನ ನೀಡಿದನು ಎಂದು ರೋಣದ **(ಜಿ.ಕೆ.ದೇವರಾಜಸ್ವಾಮಿ.ಕಳಚೂರಿ ಶಾಸನಗಳು. ನಂ.311; ಬಿ.ಕೆ.ನಂ.174–1926–27, ಎಸ್,ಆಯ್.ಆಯ್.ಸಂ.15 ನಂ.136.; ಈರಣ್ಣ ಪತ್ತಾರ ಕಳಚೂರಿಗಳ ಶಾಸನಗಳು, ನಂ.208; ಇ.ಆಯ್.19.ಪು–236)** ಶಾಸನವು ಹೇಳುತ್ತದೆ.

ಬಳ್ಳಿಗಾವಿಯ ಕ್ರಿ.ಶ.1181 ರ ಶಾಸನವು ಪಮುಚಮಠ, ಹಿರಿಯಮಠದ ಆಚಾರ್ಯವರ್ಮೂಲಿಗಧರ್ವರ್ಮಶಿವದೇವರು ಪಂಚಲಿಂಗದ ಆಚಾರ್ಯ ರುದ್ರಶಕ್ತಿದೇವರು, ತ್ರಿಪುರಾಂತಕದ ಆಚಾರ್ಯ ಜ್ಞಾನಶಕ್ತಿದೇವರು ಪ್ರಮುಖ ನಗರ ಪಂಚಮಠದವರು ಎಂದು ಹೇಳುತ್ತಾ ಮುಂದುವರೆದು ದೇವಾಲಯಗಳಿಗೆ ದಾನವಾಗಿ ಬಂದಿರುವ ಧರ್ಮವನ್ನು ಪ್ರತಿಪಾಳಿಸುವರು ಎಂದು ಹೇಳುತ್ತದೆ.

ಒಟ್ಟಾರೆ ಮಠಗಳು ಧಾರ್ಮಿಕ, ಶೈಕ್ಷಣಿಕ, ಧೀನ ದಲಿತರ ಆಶ್ರಯ ತಾಣಗಳಾಗಿ, ಕಲೆಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ. ದಾನಗಳನ್ನು ಸ್ವೀಕರಿಸುವುದರೊಂದಿಗೆ ದಾನ ನೀಡುವ ಕಾರ್ಯಗಳನ್ನು ನಿರ್ವಹಿಸುತ್ತವೆ. ಸಾಮಾನ್ಯವಾಗಿ ಅಲ್ಲಿರುವ ಮುನಿಗಳು ರಾಜಗುರುಗಳಾಗಿ, ಸ್ಥಾನಾಚಾರ್ಯರಾಗಿ, ಬೋಧಕರಾಗಿ, ಕಾರ್ಯನಿರ್ವಹಿಸುವರು. ಮತ್ತು ಅವರ ಪಾಂಡಿತ್ಯ ಮತ್ತು ಬಿರುದಾವಳಿಗಳ ಮೂಲಕ ಅವರ ಜ್ಞಾನದ ಪರಾಕಾಷ್ಠತೆಯನ್ನು ಗುರುತಿಸಲು ಸಾಧ್ಯವಾಗಿದೆ. ಶಾಸನಗಳ ಆರಂಭದಲ್ಲಿ ಶಿವ, ವಿಷ್ಣು ಮತ್ತು ಜೀನರ ಪ್ರಾರ್ಥನೆಗಳೊಂದಿಗೆ ಆರಂಭವಾದರೆ ಕೊನೆಯಲ್ಲಿ ಶಾಪಾಶಯಗಳನ್ನು ಹಾಕಿರುವುದನ್ನು ಕಾಣಬಹುದು ಆದುದರಿಂದಲೇ ಪ್ರಾಚೀನ ಮಠಗಳ ಕಾರ್ಯನಿರ್ವಹಣೆಯನ್ನು ತಿಳಿಸಲು ಇಂದಿಗೂ ಈ ಶಾಸನಗಳು ಉಳಿದು ಬಂದಿರುವುದೇ ಸಾಕ್ಷಿ.

ಅಂದಿನ ಮಠಗಳ ಪರಂಪರೆಯನ್ನು ಇಂದಿನ ಮಠಗಳೂ ಮುಂದುವರೆಸಿಕೊಂಡು ಬಂದಿರುವುದರಿಂದ ಆಧುನಿಕ ಸರ್ಕಾರಿ ಶಾಲಾ ಕಾಲೇಜುಗಳು. ಆಶ್ರಮಗಳು. ಅನಾಥಾಲಯಗಳು. ಔಷಧಾಲಯಗಳು ಸ್ಥಾಪನೆಯಾಗುವುದಕ್ಕಿಂತ ಮುಂಚೆಯೇ ಈ ಕಾರ್ಯಗಳನ್ನು ಮಠಗಳು ಮಾಡುತ್ತಿದ್ದವು ಇಂದೂ ಕಾನಬಹುದಾಗಿದೆ. ಉದಾಹರಣೆಗೆ. ತುಮಕೂರಿನ ಸಿದ್ಧಗಂಗಾ ಮಠ. ತರಳಬಾಳು ಮಠ. ಇಲಕಲ್ ಶ್ರೀ. ವಿಜಯ ಮಹಾಂತ ಮಠ. ನರೆಗಲ್ ಅನ್ನದಾನೇಶ್ವರ ಮಠ ಇನ್ನೂ ಅನೇಕ ಮಠಗಳು ಅಂದಿನ ತ್ರೀವಿಧ ದಾಸೋಹ ಪದ್ಧತಿಗಳನ್ನು ಅನುಸರಿಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಪರಂಪರೆಯನ್ನು ಸಾರಿ ಹೇಳುವ ಶಾಸನಗಳನ್ನು ಮುಂದಿನ ಪೀಳಿಗೆಯವರಿಗೂ ತಲುಪಿಸಿ ಅದರ ಮಹತ್ವವನ್ನು ಸಾರಿ ಹೇಳುವ ಜವಾಬ್ದಾರಿ ಸಮಾಜದ ಪ್ರತಿಯೊಬ್ಬರ ಮೇಲಿದೆ ಎಂಬುದನ್ನು ಈ ಲೇಖನದ ಮೂಲಕ ತಿಳಿಯಪಡಿಸುತ್ತೇನೆ.


**ಆಕರ ಗ್ರಂಥಗಳು :**


1. ಹಿರೇಮಠ ಚನ್ನಬಸಯ್ಯ (1995): ಕುರುಗೋಡು ಸಿಂಧರು
2. ಜಿ.ಕೆ.ದೇವರಾಜಸ್ವಾಮಿ : .ಕಳಚೂರಿ ಶಾಸನಗಳು : ಯುವಸಾಧನೆ ಬೆಂಗಳೂರು.2017
3. ಈರಣ್ಣ ಪತ್ತಾರ : ಕಳಚೂರಿಗಳ ಶಾಸನಗಳು : ಮನು ಪ್ರಕಾಶನ ಧಾರವಾಡ.
4. South Indian Inscriptions : Archaeological Survey of India, Delhi.
5. ಬಿ.ಎಲ್.ರೈಸ್. (ಸಂ) : ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು : ಮೈಸೂರು ಪುರಾತತ್ವ ಇಲಾಖೆ. ಬೆಂಗಳೂರು.
6. ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು (ಪರಿಷ್ಕೃತ ಆವೃತ್ತಿ : ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾಲಯ. ಮೈಸೂರು.
7. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು

ಸಿದ್ಧಗಂಗಾ ಮಠದ ಮಠಾಧಿಪತಿಗಳಾಗಿದ್ದ ಶ್ರೀ ಶಿವಕುಮಾರ ಸ್ವಾಮಿಗಳು ಒಬ್ಬ ಭಾರತೀಯ ಆಧ್ಯಾತ್ಮಿಕ ನಾಯಕ, ಮಾನವೀಯ ಮತ್ತು ಶಿಕ್ಷಣ ತಜ್ಞ, ಅವರು ಶ್ರೀ ಸಿದ್ಧಗಂಗ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದರು. ಅವರನ್ನು ರಾಜ್ಯದಲ್ಲಿ ನಡೆದಾಡುವ ದೇವರು ಎಂದೂ ಕೂಡ ಉಲ್ಲೇಖಿಸಲಾಗಿದೆ. ಭಾರತದಲ್ಲಿ ವಾಸಿಸುತ್ತಿದ್ದ ಅತೀ ಪುರಾತನ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅವರಿಗೆ ಭಾರತ ಸರಕಾರ 2015ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿದೆ.

ಇವರು ತ್ರಿವಿಧ ದಾಸೋಹಿ, ಯುಗಪುರುಷ, ಬಸವಣ್ಣನವರ ಕಾಯಕವೇ ಕೈಲಾಸ ಮತ್ತು ನಿತ್ಯ ದಾಸೋಹ ತತ್ವದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಇವರು ಶ್ರೀಮಠದ ಜವಾಬ್ದಾರಿಯನ್ನು 1930ರಲ್ಲಿ ಹೊತ್ತುಕೊಂಡವರು, ನಿರಂತರ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದರು. ಶ್ರೀಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಠದ ಆದಾಯ ತುಂಬಾ ಕಡಿಮೆ ಇತ್ತು. ಮಠದ ಭೂಮಿಯೆಲ್ಲ ಮಳೆಯಾಧಾರಿತವಾದ್ದು. ಇವೆಲ್ಲವುಗಳನ್ನು ಧೈರ್ಯವಾಗಿ ಮೆಟ್ಟಿನಿಂತು ಶ್ರೀಗಳು ದವಸ ಧಾನ್ಯಗಳನ್ನು ಭಕ್ತರ ಮನೆಯಿಂದ ತಂದಿದ್ದು ಉಂಟು. ಮಠದ ಶಿಕ್ಷಣ ಸಂಸ್ಥೆಗಳನ್ನು ವಿದ್ಯಾರ್ಥಿ ನಿಲಯಗಳಲ್ಲಿ ಸಮರ್ಥವಾಗಿ ಮುನ್ನಡೆಸಿದವರು. ವಯೋಸಂಬಂಧಿ ಅನಾರೋಗ್ಯದಿಂದ 2019 ಜನೇವರಿ 21 ರಂದು ಬೆಳಿಗ್ಗೆ ರಕ್ತದೊತ್ತಡ ಏರುಪೇರಾಗಿ ಶ್ರೀಗಳು ಸಿದ್ಧಗಂಗಾ ಮಠದ ಹಳೆಯ ಕಟ್ಟಡದಲ್ಲಿ ತಮ್ಮ 111 ವಯಸ್ಸಿನಲ್ಲಿ ಲಿಂಗೈಕ್ಯರಾದರು.

– ಪ್ರಾ. ಎ. ಬಿ. ಕುಲಕರ್ಣಿ
ಎಂ.ಜಿ.ವ್ಹಿ.ಸಿ. ಮಹಾವಿದ್ಯಾಲಯ
ಮುದ್ದೇಬಿಹಾಳ



ISBN 978 93 92187 01 8